# ಮೈಸೂರು ವಿಶ್ವವಿದ್ಯಾನಿಲಯ

## ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು–೫೭೦೦೦೬

## ಸಂಶೋಧನಾ ವೇದಿಕೆ ಉದ್ಘಾಟನಾ ಮತ್ತು

## ಬ್ಲಾಗ್ ಅನಾವರಣ ಕಾರ್ಯಕ್ರಮ



ದಿನಾಂಕ 22–07–2024 ರಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ವೇದಿಕೆ ಉದ್ಘಾಟನಾ ಮತ್ತು ಬ್ಲಾಗ್ ಅನಾವರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮದ ಉದ್ಘಾಟಕರಾಗಿ ನಾಡಿನ ಉದಯೋನ್ಮುಖ ಬರಹಗಾರರು, ಕವಿಗಳಾದ ಪ್ರೊ. ಅರವಿಂದ ಮಾಲಗತಿ ಅವರು ಸಂಶೋಧನಾ ವೇದಿಕೆಯನ್ನು ಸಂಶೋಧನಾ ವಿದ್ಯಾರ್ಥಿಗಳು ಹೊರತರುತ್ತಿರುವ ' ಶತಮಾನಕ್ಕೆ ಮುನ್ನುಡಿ' ಎಂಬ ಬ್ಲಾಗ್‌ನ್ನು ಉದ್ಘಾಟಿಸಿ ಮಾತನಾಡುತ್ತಾ ವಿದ್ಯುನ್ಮಾನ ಮಾಧ್ಯಮವು ಚಾಲ್ತಿಯಲ್ಲಿರುವಾಗ ಮುದ್ರಣ ಮಾಧ್ಯಮವು ನೆಲಕಚ್ಚುತ್ತದೆ ಎಂಬ ಆತಂಕ ಇಂದು ದೂರವಾಗಿದೆ ಯಾಕೆಂದರೆ ಮುದ್ರಣ ಮಾಧ್ಯಮದಲ್ಲಿ ಅಡಗಿರುವ ಶಕ್ತಿಯೇ ಇದಕ್ಕೆ ಕಾರಣವಾಗಿದೆ. ಭಾರತಂದಹ ದೇಶದಲ್ಲಿ ಮುದ್ರಣ ವಿದ್ಯುನ್ಮಾನ ಮತ್ತು ಸಾಮಾಜಿಕ ಮಾಧ್ಯಮಗಳಿಗೂ ಜೀವಂತಿಕೆ ಇದೆ. ಬೇರೆ ಬೇರೆ ದೇಶಗಳಲ್ಲಿ ಇಂದು ದೊಡ್ಡ ದೊಡ್ಡ ಪತ್ರಿಕೆಗಳನ್ನ ಮುಚ್ಚಲಾಗಿದೆ ಆದರೆ ಭಾರತ ದೇಶದಲ್ಲಿ ಇಂತಹ ಪರಿಸ್ಥಿತಿಗಳನ್ನ ನಾವು ನೋಡುತ್ತಿಲ್ಲ ಎಂದರು. ಬ್ಲಾಗ್ ಮತ್ತು ವೇದಿಕೆಯನ್ನ ಹೇಗೆ ಕಸಿ ಕಟ್ಟಬೇಕು ಹಾಗೂ ಅವುಗಳನ್ನ ಹೇಗೆ ಜೀವಂತಿಕೆಯಲ್ಲಿಡಬೇಕು ಎಂಬುದು ನಿಮ್ಮ ಅರಿವಿಗೆ ಬರಬೇಕು. ಸಂಶೋಧನಾ ಲೇಖನಗಳನ್ನು ಬರೆಯುವ ಹವ್ಯಾಸಗಳನ್ನ ನೀವು ರೂಡಿಸಿಕೊಂಡು ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಸಂಶೋಧಕರ ಜೊತೆ ನಿಕಟ ಸಂಪರ್ಕ ಇಟ್ಟುಕೊಳ್ಳುವುದರ ಜೊತೆಗೆ ಸಂಶೋಧನೆಯಲ್ಲಿ ಮಡಿವಂತಿಕೆಯನ್ನ ಬಿಟ್ಟರಷ್ಟೇ ಏನನ್ನಾದರೂ ಕ್ರೀಯಾಶೀಲವಾಗಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಸಲಹೆಯನ್ನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನ ವಹಿಸಿ ಮಾತನಾಡಿದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಎನ್.ಕೆ ಲೋಲಾಕ್ಷಿ ಅವರು ಮಾತನಾಡುತ್ತಾ ಸಂಸ್ಥೆಯ ಸಂಶೋಧನಾ ವಿದ್ಯಾರ್ಥಿಗಳೆಲ್ಲರೂ ಸದಾ ಕ್ರಿಯಾಶೀಲರಾಗಿರಬೇಕು ಜೊತೆಗೆ ತಾವು ಆಯ್ದುಕೊಂಡ ಸಂಶೋಧನಾ ವಿಷಯಗಳಲ್ಲಿ ಆಳವಾದ ಜ್ಞಾನವನ್ನು ಹೆಚ್ಚಿಸಿಕೊಂಡು ಮಾದರಿ ಸಂಶೋಧಕರಾಗಿ ಹೊರ ಹೊಮ್ಮಬೇಕೆಂದು ಕಿವಿಮಾತು ಹೇಳಿದರು.

ನಿರ್ದೇಶಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬